116
149ಸಿಎ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ**

**ಸೂಚನೆ:-**

ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಿರಗಂದೂರು ಗ್ರಾಮದ ಸರ್ವೇ ನಂ: 204 ರ ದಲಿತರ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಬಡಾವಣೆ ನಿರ್ಮಿಸಿದ್ದು, ತುಂಡು ಭೂಮಿಗಳಾಗಿ ವಿಂಗಡಿಸಿ ಯಾವುದೇ ಅನುಮೋದನೆಗಳನ್ನು ನಿಯಮಾನುಸಾರ ಪಡೆಯದೇ ಅಕ್ಕ-ಪಕ್ಕದ ಬಡಾವಣೆಗಳ ರಸ್ತೆಗಳಿಗೆ ಸಂಪರ್ಕ ತಪ್ಪಿಸಿ, ನೀರಾವರಿ ಇಲಾಖೆಯ ಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಸಾರ್ವಜನಿಕರು ದೂರುಗಳನ್ನು ನೀಡಿದ್ದರೂ ಸಹ, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದೇ ಅನಧಿಕೃತ ಬಡಾವಣೆ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.

**ಉತ್ತರ:-**

ಮಂಡ್ಯ ತಾಲ್ಲೂಕು, ಕಿರಗಂದೂರು ಗ್ರಾಮದ ಸ.ನಂ 204 ಕ್ಕೆ ಸಂಬಂಧಿಸಿದಂತೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ರವರು ಸಲ್ಲಿಸಿರುವ ವರದಿಯಂತೆ ಸ.ನಂ 204 ರಲ್ಲಿನ ಜಮೀನನ್ನು 11ಇ ನಕ್ಷೆ ಮುಖಾಂತರ 204/1 ರಿಂದ 41 ರವರಗೆ ವಿಭಜಿಸಿ ತುಂಡು ಭೂಮಿಗಳನ್ನಾಗಿ ವಿಂಗಡಿಸಿಕೊಂಡು ನಂತರ ಸ.ನಂ 204/10, ಸ.ನ 204/19, ಸ.ನಂ 204/20, ಸ.ನಂ 204/21, ಸ.ನಂ 204/22, ಸ.ನಂ 204/24, ಸ.ನಂ 204/25, ಸ.ನಂ 204/26, ಸ.ನಂ 204/27, ಸ.ನಂ 204/28 ಮತ್ತು ಸ.ನಂ 204/30 ರ ಕೃಷಿ ಭೂಮಿಯನ್ನು ಖರೀದಿಸಿದ ಮಾಲೀಕರುಗಳು ತಮ್ಮ ಮಾಲೀಕತ್ವದಲ್ಲಿರುವ ವಿಸ್ತೀರ್ಣವನ್ನು ಭೂ ಪರಿವರ್ತಿಸಿಕೊಂಡಿರುತ್ತಾರೆ. ತದನಂತರ ಸ.ನಂ 204/10, ಸ.ನ 204/19, ಸ.ನಂ 204/21, ಸ.ನಂ 204/22, ಸ.ನಂ 204/24, ಸ.ನಂ 204/25, ಸ.ನಂ 204/26, ಸ.ನಂ 204/27, ಮತ್ತು ಸ.ನಂ 204/28 ರ ಜಮೀನುಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವುದರಿಂದ ಅನಧಿಕೃತ ಬಡಾವಣೆ ಎಂದು ಪರಿಗಣಿಸಲು ಬರುವುದಿಲ್ಲ.

ಮುಂದುವರೆದು, ಕಿರಗಂದೂರು ಗ್ರಾಮದ ಸ.ನಂ. 204 ರ ಜಮೀನು ಹಿಡುವಳಿ ಜಮೀನಾಗಿರುತ್ತದೆ. ಪಿಟಿಸಿಎಲ್ ಕಾಯ್ದೆಗೆ ಒಳಪಟ್ಟಿರುವುದಿಲ್ಲ. ಸದರಿ ಸ.ನಂ.204 ರಲ್ಲಿರುವ ನಾಲೆಯು ಒತ್ತುವರಿಯಾಗಿರುವುದು ಕಂಡುಬಂದಿರುವುದಿಲ್ಲ.

**(ಆರ್‌ಡಿ 40 ಎಲ್‌ಜಿವ್ಯೆ 2026)**

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ